# ಸಂಪಾದಕೀಯ

# ರಾಮಕೃಷ್ಣಾವತಾರದ ಮೂರು ಮುಖಗಳು-೩

## ದೇವರ ಮೂರು ಲಕ್ಷಣಗಳು

ವೇದಾಂತದಲ್ಲಿ ದೇವರನ್ನು ಸಚ್ಚಿದಾನಂದಸ್ವರೂಪ ಎಂದು ಕರೆಯುತ್ತಾರೆ. ಅವನು ಸತ್—ಅಂದರೆ ಈ ಜಗತ್ತಿನ ಹಿಂದಿರುವ ಸತ್ಯಾಂಶವೇ ಅವನು. ಅವನಿಂದಲೇ ಜಗತ್ತಿನ ಎಲ್ಲ ವಸ್ತುಗಳು ಅಸ್ತಿತ್ವವನ್ನೂ ಸತ್ಯತೆಯನ್ನೂ ಪಡೆಯುತ್ತವೆ. ಆದರೆ ಈ ಸತ್ಯ ಜಡವಾದುದಲ್ಲ, ಅದು ಚಿತ್‌ಸ್ವರೂಪ, ಚೇತನಾತ್ಮಕ. ಅಂದರೆ ಅದು ಪ್ರಜ್ಞಾವಂತವಾದುದು—ಅರಿವಿನಿಂದ ಕೂಡಿದುದು. ಆದ್ದರಿಂದ ಅರಿವೇ ದೇವರು ಎಂದು ಹೇಳುತ್ತಾರೆ. ಈ ಅರಿವು ಹೆಚ್ಚು ಅಭಿವ್ಯಕ್ತವಾದಷ್ಟೂ ಶುದ್ಧ ಆನಂದದ ಅನುಭವವಾಗುತ್ತದೆ. ಈ ಆನಂದವೂ ದೇವರಿಗೇ ಸೇರಿದುದು.

ಈಗ ಈ ಲಕ್ಷಣಗಳನ್ನು ರಾಮಕೃಷ್ಣಾವತಾರಕ್ಕೆ ಅನ್ವಯಿಸಲು ಸಾಧ್ಯವೇ ಎಂಬುದನ್ನು ನೋಡೋಣ. ಶ್ರೀಮಾತೆಯವರು ಸತ್ ಅಂಶವನ್ನು ಪ್ರತಿನಿಧಿಸುತ್ತಾರೆ ಎನ್ನಬಹುದು. ಏಕೆಂದರೆ ತಾಯಿಯೇ ಮಕ್ಕಳಿಗೆ ನಿಜವಾದ ಅಸ್ತಿತ್ವವನ್ನು ನೀಡುವವಳು ಎನ್ನಬಹುದು. ಮಕ್ಕಳಿಗೆ ಜನ್ಮನೀಡುವುದು ಮಾತ್ರವಲ್ಲದೆ ಅವರನ್ನು ಅಕ್ಕರೆಯಿಂದ ಸಾಕಿ ಸಲಹಿ, ತನ್ನ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಅವರಿಗೆ ನಿಜವಾದ ತರಬೇತಿಯನ್ನು ನೀಡಿ ಅವರಿಗೆ ಒಂದು ವ್ಯಕ್ತಿತ್ವವನ್ನು ನೀಡುವವಳು ಅವಳು. ಜಗನ್ಮಾತೆಯ ಕ್ರಿಯಾಶಕ್ತಿಯಿಂದಲೇ ಇಡೀ ಜಗತ್ತು ತನ್ನ ಅಸ್ತಿತ್ವನ್ನು ಪಡೆದಿದೆ. ವೇದಾಂತದ ಒಂದು ಸಿದ್ಧಾಂತದ ಪ್ರಕಾರ ಭಗವಂತನ ಸತ್ ಅಂಶವೇ ಜಗತ್ತಾಗಿ ಅಭಿವ್ಯಕ್ತವಾಗಿದೆ. ಮತ್ತೆ *ಸೌಂದರ್ಯಲಹರಿ*ಯಲ್ಲಿ ಶಂಕರಾಚಾರ್ಯರು ಹೇಳುತ್ತಾರೆ, "ಶಿವನು ಶಕ್ತಿಸಮೇತನಾಗಿರುವುದರಿಂದಲೇ ಜಗತ್ತನ್ನು ಸೃಷ್ಟಿಸಲು ಸಮರ್ಥನಾಗಿರುತ್ತಾನೆ," ಎಂದು. ಸೃಷ್ಟಿಶಕ್ತಿ ಮತ್ತು ಸದಂಶ ಇವುಗಳಿಗೆ ನಿಕಟ ಸಂಬಂಧವಿರುವುದರಿಂದಲೂ ಶ್ರೀಮಾತೆಯವರು ಆ ದಿವ್ಯಶಕ್ತಿಯ ಅವತಾರವಾಗಿರುವುದರಿಂದಲೂ ಅವರನ್ನು ಸದಂಶದ ಪ್ರತಿನಿಧಿ ಎಂದು ಪರಿಗಣಿಸುವುದರಲ್ಲಿ ತಪ್ಪೇನಿಲ್ಲ ಎಂದೆನಿಸುತ್ತದೆ. ಅವರಲ್ಲಿ ಮಾತೃಭಾವದ ವಿಶೇಷ ಅಭಿವ್ಯಕ್ತಿಯನ್ನು ಕಾಣುತ್ತ ನೂರಾರು, ಸಾವಿರಾರು ಜನ ಭಕ್ತರು ಅವರನ್ನು ಮುತ್ತಿದರು ಮತ್ತು ಅವರೆಲ್ಲರನ್ನೂ ವಯೋಭೇದವಿಲ್ಲದೆ, ಜಾತಿಭೇದವಿಲ್ಲದೆ ತಮ್ಮ ಸ್ವಂತ ಮಕ್ಕಳಂತೆ ಶ್ರೀಮಾತೆಯವರು ನೋಡಿಕೊಳ್ಳುತ್ತಿದ್ದರು ಎಂಬುದನ್ನು ಅವರ ಜೀವನದಲ್ಲಿ ನಾವು ನೋಡಿರುವೆವು.

ಸ್ವಾಮಿ ವಿವೇಕಾನಂದರು ಚಿದಂಶವನ್ನು ಪ್ರತಿನಿಧಿಸುತ್ತಾರೆ ಎನ್ನಬಹುದು. ಏಕೆಂದರೆ ಅವರಲ್ಲಿ ಜ್ಞಾನವು ಪ್ರಖರವಾಗಿ ಎದ್ದುಕಾಣುತ್ತದೆ ಮತ್ತು ಅವರು ಜನರ ಚೈತನ್ಯವನ್ನು ಜಾಗೃತಗೊಳಿಸುವುದರಲ್ಲಿ ಸಮರ್ಥರಾದರು. "ಬಹುಶಃ ಇತ್ತೀಚೆಗಿನ ಇತಿಹಾಸದಲ್ಲಿ ಸ್ವಾಮಿ ವಿವೇಕಾನಂದರಷ್ಟು ಶಕ್ತಿಯುತವಾಗಿ ಮಾನವನ ಚೈತನ್ಯವನ್ನು ಜಾಗೃತಗೊಳಿಸಿದವರು ಯಾರೂ ಇಲ್ಲ" ಎಂದು ಹೇಳಲಾಗಿದೆ (ಉದ್ಧೃತ : *ವೇದಾಂತ ಕೇಸರಿ*, ೧೯೯೮, ಫೆಬ್ರುವರಿ ಪು.೭೭). ವಿವೇಕಾನಂದರನ್ನು "ರಾಷ್ಟ್ರಚೇತನ" ಎಂದು ಪರಿಗಣಿಸಿರುವುದನ್ನು ನಾವಿಲ್ಲಿ ಗಮನಿಸತಕ್ಕದ್ದು.

**ಬಹುಶಃ ಇತ್ತೀಚೆಗಿನ ಇತಿಹಾಸದಲ್ಲಿ ಸ್ವಾಮಿ ವಿವೇಕಾನಂದರಷ್ಟು ಶಕ್ತಿಯುತವಾಗಿ ಮಾನವನ ಚೈತನ್ಯವನ್ನು ಜಾಗೃತಗೊಳಿಸಿದವರು ಯಾರೂ ಇಲ್ಲ.**

ಭಗವಂತನ ಚಿತ್ ಅಂಶವೇ ಜೀವಶಕ್ತಿಯಾಗಿ ಅಭಿವ್ಯಕ್ತವಾಗಿರುವುದು. ಚಿದಂಶವು ಹೆಚ್ಚು ಹೆಚ್ಚು ಅಭಿವ್ಯಕ್ತವಾದಷ್ಟೂ ಯಾವುದೇ ಕ್ಷೇತ್ರದಲ್ಲಿ ಉನ್ನತಿಯ ಪರಮಾವಧಿಯನ್ನು ಸಾಧಿಸಲು ಸಾಧ್ಯವಾಗುತ್ತದೆ. ನಮಗೆ ತಿಳಿದಿರುವಂತೆ ವಿವೇಕಾನಂದರು ಮಾನವಚಟುವಟಿಕೆಯ ಅನೇಕ ಕ್ಷೇತ್ರಗಳಲ್ಲಿ ನಿಷ್ಣಾತರಾಗಿದ್ದರು. "ಅವರು ಮಾನವ ಶಕ್ತಿಗಳ ಸಮನ್ವಯದ ಮೂರ್ತರೂಪವಾಗಿದ್ದರು" ಎಂದು ರೋಮ್ಯೆ ರೋಲಾ ಹೇಳುತ್ತಾರೆ. ಅವರಲ್ಲಿದ್ದ ಪ್ರಚಂಡ ಕ್ರಿಯಾಶೀಲತೆ ಮತ್ತು ವೈಚಾರಿಕ ನವೀನತೆಗಳು ಚಿತ್‌ಶಕ್ತಿಯ ವಿಶೇಷ ಆವಿರ್ಭಾವವನ್ನು ಸೂಚಿಸುತ್ತವೆ, ಅವರೊಂದು ಚೈತನ್ಯದ ಚಿಲುಮೆ ಎಂಬುದನ್ನು ತೋರಿಸುತ್ತವೆ.

ಶ್ರೀಮತಿ ಲಿಲಿಯನ್ ಮಾಂಟ್‌ಗೊಮೇರಿಯವರು ತಾವು ವಿವೇಕಾನಂದರನ್ನು ಕಂಡ ಬಗೆಯನ್ನು ವಿವರಿಸುತ್ತಾರೆ: "ಅವರನ್ನು ನೋಡುವುದೊಂದು ಅಚ್ಚರಿಯ ಹೊಸ ಅನುಭವವೆಂಬುದನ್ನು ನಾನು ಕನಸಿನಲ್ಲಿಯೂ ಭಾವಿಸಿರಲಿಲ್ಲ. ನಾನು ಹಿಂದೆಂದೂ ನೋಡಿರದ ಬೆಳಕಿನ ಮೂರ್ತಿಯಾಗಿದ್ದರು ಅವರು. ಚೈತನ್ಯದ ಬೆಳಕು ಅಷ್ಟೊಂದು ಪವಿತ್ರ ರೀತಿಯಲ್ಲಿ ಅಭಿವ್ಯಕ್ತಿಸಿದ್ದನ್ನು ನಾನೆಲ್ಲೂ ಕಂಡಿರಲಿಲ್ಲ. ಅವರು ಮಾತನಾಡುತ್ತಿರುವಾಗ ಪ್ರತಿಯೊಂದು ಶಬ್ದವೂ ಬೆಳಕಿನಿಂದ ರೂಪಿತವಾದಂತೆಯೂ ಆ ಬೆಳಕು ಆ ಶಬ್ದಕ್ಕೆ ಹೊಸ ಅರ್ಥವನ್ನು ನೀಡುತ್ತಿರುವಂತೆಯೂ

ಭಾಸವಾಗುತ್ತಿತ್ತು. ಅವರು ತಾವು ವ್ಯಕ್ತಪಡಿಸುತ್ತಿದ್ದ ಭಾವನೆಗಳ ಜೀವಂತ ಮೂರ್ತಿಯಾಗಿದ್ದರು... ಅವರು ನನಗೆ ತಿಳಿದಿರದ ಒಂದು ಪ್ರಜ್ಞಾವಲಯವನ್ನು ಪ್ರಕಾಶಪಡಿಸುತ್ತಿದ್ದರು. ಪ್ರಜ್ಞಾ ಸರೋವರವೇ ಅವರ ಹಿನ್ನೆಲೆಯಲ್ಲಿ ಇರುವಂತೆಯೂ ಅವರ ಮಾತಿನ ಮೂಲಕ ಅದು ಹೊರಚಿಮ್ಮುತ್ತಿರುವಂತೆಯೂ ಕಂಡು ಬಂದಿತು." (*Vivekananda, A Comprehensive Study*, p. 175)

ಈಗ ಶ್ರೀರಾಮಕೃಷ್ಣರ ಕಡೆ ನಮ್ಮ ದೃಷ್ಟಿ ಹರಿಸೋಣ. ಅವರ ಜೀವನವನ್ನು ನೋಡಿದಾಗ ನಮಗನಿಸುವುದೇನೆಂದರೆ ಅವರು ಆನಂದಸ್ವರೂಪಿಗಳು ಎಂಬುದು. ಅವರ ಎಲ್ಲ ಶಿಷ್ಯರೂ ಈ ವಿಷಯವನ್ನು ಸಮರ್ಥಿಸುತ್ತಾರೆ. ಎಳೆ ಮಗು ತನ್ನ ತಾಯಿಯ ತೊಡೆಯ ಮೇಲೆ ನಲಿದಾಡುವಂತೆ ಅವರ ಜೀವನವಿತ್ತು. ಅವರು ಬಾಲಕನಾಗಿದ್ದಾಗ ಯಾವಾಗಲೂ ಸ್ನೇಹಿತರೊಡನೆ ಆಟ ವಾಡುತ್ತ ಆನಂದದಿಂದ ಕಾಲಕಳೆಯುತ್ತಿದ್ದರು. ತಂದೆತಾಯಿಗಳಿಗೆ ಮಾತ್ರವಲ್ಲದೆ ನೆರೆಹೊರೆಯವರೆಲ್ಲರಿಗೂ ಅವರು ಆನಂದ ವನ್ನು ನೀಡುತ್ತಿದ್ದರು. ಅವರನ್ನು ನೋಡಿ ಆನಂದಿಸುವುದಕ್ಕಾಗಿ ಹಳ್ಳಿಯ ಜನರೆಲ್ಲ ಅವರನ್ನು ಹುಡುಕಿಕೊಂಡು ಬರುತ್ತಿದ್ದರು. ಮುಂದೆ ಸಾಧನೆಯ ಸಮಯದಲ್ಲಿ ಕಠಿನ ತಪಸ್ಸನ್ನಾಚರಿಸು ತ್ತಿದ್ದರೂ, ಭಗವದ್ ವ್ಯಾಕುಲತೆಯಿಂದ ಉನ್ಮತ್ತರಾಗಿದ್ದರೂ ತಮ್ಮ ಆನಂದಭಾವವನ್ನು ಮಾತ್ರ ಬಿಡಲಿಲ್ಲ—ಅದೇ ಬಾಲಕ ಸ್ವಭಾವ ಅವರಲ್ಲಿ ಎದ್ದು ಕಾಣುತ್ತಿತ್ತು. ಮುಂದೆ ಭಕ್ತ ರೊಡನೆಯೂ ಅತ್ಯಾನಂದದಿಂದ ಕಾಲಕಳೆದರು. ಭಗವದಾಲಾಪ, ಭಜನೆ, ನೃತ್ಯ ಇತ್ಯಾದಿಗಳಲ್ಲಿಯೇ ಇಡೀದಿನ ಕಳೆದುಹೋಗು ತ್ತಿತ್ತು. ಇಷ್ಟೇ ಅಲ್ಲದೆ ಹಾಸ್ಯಚಟಾಕಿಗಳನ್ನು ಹಾರಿಸುತ್ತ ತಾವೂ ನಕ್ಕು ಇತರರನ್ನೂ ನಗಿಸುತ್ತಿದ್ದರು.

ಅವರು ಪ್ರಾಣಾಂತಿಕ ಕಾಯಿಲೆಯಿಂದ ನರಳುತ್ತಿದ್ದಾಗಲೂ ಅವರ ಆನಂದಭಾವ ಸ್ವಲ್ಪವೂ ಹ್ರಸ್ವಗೊಳ್ಳಲಿಲ್ಲ. ಸ್ವಾಮಿ ಅದ್ಭುತಾನಂದರು ಹೇಳುತ್ತಾರೆ: "ಅವರು(ಶ್ರೀರಾಮಕೃಷ್ಣರು) ಎಲ್ಲಿ ನರಳುತ್ತಿದ್ದರು? ಅವರೇ ಹೇಳುತ್ತಿದ್ದರು, 'ದೇಹ ರೋಗವನ್ನು ಅನುಭವಿಸಲಿ, ಮನಸ್ಸೇ, ನೀನು ಆನಂದದಲ್ಲಿರು' ಎಂದು. ಅವರಿಗೆ ಸ್ವಲ್ಪವೂ ಕಷ್ಟವಿರಲಿಲ್ಲ. ಒಂದೊಂದು ಸಮಯದಲ್ಲಿ ಅವರಿಗೆ ಯಾವ ರೀತಿಯ ಅವಸ್ಥೆ ಉಂಟಾಗುತ್ತಿತ್ತೆಂದರೆ ಇಡೀ ದೇಹವೂ ಪುಲಕಿತವಾಗುತ್ತಿತ್ತು. ನಾನಂತೂ ನೋಡಿದ್ದೇನೆ ಅವರು ಎಷ್ಟೊಂದು ಆನಂದದಲ್ಲಿ ಇರುತ್ತಿದ್ದರು ಎಂಬುದನ್ನು!.... ಅವರು ನಿಜವಾಗಿಯೂ ವ್ಯಥೆ ಪಡುತ್ತಿದ್ದಿದ್ದರೆ ನಮಗೆ ಅವರು ಅಷ್ಟೊಂದು ಆನಂದ ನೀಡಲು ಸಾಧ್ಯವಾಗುತ್ತಿತ್ತೇ? ಒಂದೊಂದು ದಿನ ನಮಗೆ ಕೀರ್ತನೆ ಮಾಡಲು ಹೇಳುತ್ತಿದ್ದರು. ಕೀರ್ತನೆಯಲ್ಲಿ ತಾವೂ ಭಾಗವಹಿಸಿ ಹೊಸ ಹೊಸ ಶಬ್ದಗಳನ್ನು ಅವರು ಸೇರಿಸು ತ್ತಿದ್ದರು... ಅವರ ಶರೀರ ರೋಗಗ್ರಸ್ತವಾಗಿರುವಾಗಲೂ ಈ ಭಾವದಲ್ಲಿ ಇರಬಲ್ಲರೆಂದಮೇಲೆ ಅವರಿಗೆ ಕಷ್ಟವೆಲ್ಲಿ ಬಂತು?" (*ಅದ್ಭುತ ವಾಣಿ ಪು.೨೧*)

**ಸಮಾಜದ ಮೂರು ತಳಹದಿಗಳು**

ಕುಟುಂಬ, ಸಾಮಾಜಿಕ ನೈತಿಕತೆ ಮತ್ತು ತ್ಯಾಗ—ಈ ಮೂರನ್ನು ಬಹುಮುಖ್ಯ ಸಾಮಾಜಿಕ ತಳಹದಿಗಳು ಎನ್ನ ಬಹುದು. ಕುಟುಂಬದ ಮೂಲಕ ಮಾನವೀಯ ಸಂಬಂಧಗಳು ದೃಢಗೊಳ್ಳುತ್ತವೆ. ಪರಸ್ಪರ ಪ್ರೀತಿ, ಸಹಬಾಳ್ವೆ ಇತ್ಯಾದಿ ಗುಣಗಳು ಕುಟುಂಬದಲ್ಲಿ ರೂಢಿಗೆ ಬರುತ್ತವೆ ಮತ್ತು ಇವೇ ಸಮಾಜದ ತಳಹದಿಯೂ ಆಗುತ್ತವೆ. ಪರಹಿತವನ್ನು ಆಧರಿಸಿದ ನೈತಿಕತೆ ಸಾಮಾಜಿಕ ಸುಸ್ಥಿತಿಗೆ ಎಷ್ಟು ಆವಶ್ಯಕ ಎಂಬುದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ. ಮಾನವೀಯ ಸಂಬಂಧಗಳು ಮತ್ತು ನೈತಿಕತೆ ಇವೆರಡೂ ತ್ಯಾಗವನ್ನು ಆಧರಿಸಿವೆ. ತ್ಯಾಗ ಮನೋ ಭಾವವಿಲ್ಲದೆ ಯಥಾರ್ಥ ರೀತಿಯಲ್ಲಿ ಇವುಗಳನ್ನು ಅನುಸರಿಸ ಲಾಗುವುದಿಲ್ಲ. ಈ ಮೂವರು ಮಹಾಪುರುಷರನ್ನು ಈ ಮೂರು ಸಾಮಾಜಿಕ ತಳಹದಿಗಳೊಂದಿಗೆ ಹೊಂದಿಸಲು ಸಾಧ್ಯವೇ ಎಂಬುದನ್ನು ನೋಡೋಣ.

---

**ಹತ್ತು ವ್ಯಕ್ತಿಗಳಿಂದ ಒಂದು ಸಂಸಾರ, ಹತ್ತು ಉತ್ತಮವಾದ ಸಂಸಾರಗಳಿಂದ ಒಂದು ಶ್ಲಾಘ್ಯವಾದ ಸಮಾಜ.** —ಎ.ಆರ್.ಕೃಷ್ಣಶಾಸ್ತ್ರಿ.

---

ಸಮಾಜದ ಮೂಲಭೂತ ಘಟಕವೇ ಕುಟುಂಬ. ಆರೋಗ್ಯ ವಂತ ಸಮಾಜ ನಿರ್ಮಾಣಕ್ಕೆ ಆರೋಗ್ಯವಂತ ಕುಟುಂಬ ಅನಿ ವಾರ್ಯ ಆವಶ್ಯಕ. ಇಂದು ನಾಗರೀಕತೆಯ ಮತ್ತು ಆರ್ಥಿಕ ಬದ ಲಾವಣೆಯೊಂದಿಗೆ ಕುಟುಂಬ ವ್ಯವಸ್ಥೆ ಕುಸಿಯುತ್ತಿದೆ. ಈ ಸಂದರ್ಭದಲ್ಲಿ ಶ್ರೀಮಾತೆಯವರು ಕುಟುಂಬ ಜೀವನದಲ್ಲಿ ತಮ್ಮನ್ನು ತೊಡಗಿಸಿಕೊಂಡು, ಕೌಟುಂಬಿಕ ಹೊಣೆಯನ್ನು ಹೊತ್ತು, ಕುಟುಂಬದ ಎಲ್ಲ ಆಗುಹೋಗುಗಳ ಕಡೆಗೂ ತಮ್ಮ ಗಮನವನ್ನು ಹರಿಸಿ ಸಂತರಾಗಿಯೂ ಸಂಸಾರಸ್ಥರಂತೆ ಬಾಳಿದುದು ಅತ್ಯಂತ ವೈಶಿಷ್ಟ್ಯಪೂರ್ಣವಾದುದು. ಅನೇಕ ಸ್ವಾರ್ಥಸಾಧಕ ಸಂಬಂಧಿಕರಿಂದ ಕೂಡಿದ ಅವಿಭಕ್ತ ಕುಟುಂಬದಲ್ಲಿ, ಕಷ್ಟಕರ ಸನ್ನಿವೇಶದಲ್ಲಿ ಅವರು ವಾಸಿಸಿದರು. ಅವರೇ ಕುಟುಂಬದ ಕೇಂದ್ರವ್ಯಕ್ತಿಯಾಗಿದ್ದರು. ತಮ್ಮ ಅನಂತ ತಾಳ್ಮೆಯಿಂದ, ಮಾತೃ ವಾತ್ಸಲ್ಯದಿಂದ ಕುಟುಂಬದ ಸದಸ್ಯರ ನಡುವಿನ ಮನಸ್ತಾಪ ಗಳನ್ನು ಹೋಗಲಾಡಿಸಿ ಅವರಲ್ಲಿ ಒಳ್ಳೆಯ ಬಾಂಧವ್ಯ ಏರ್ಪಡಲು ಅವರು ಪ್ರಯತ್ನಿಸಿದರು. ಅವರು ಇಷ್ಟಪಟ್ಟಿದ್ದರೆ ಕೌಟುಂಬಿಕ ಜೀವನದಿಂದ ದೂರವಿರಬಹುದಿತ್ತು, ಭಕ್ತರ ತರ ಬೇತಿಯಲ್ಲೋ ಧ್ಯಾನಜಪಾದಿಗಳಲ್ಲೋ ಸಂಪೂರ್ಣ ಕಾಲ ಕಳೆಯಬಹುದಿತ್ತು. ಆದರೆ ಇವಾವುದನ್ನೂ ಬಿಡದೆ ಕುಟುಂಬ ಜೀವನವನ್ನು ಅವರು ನಡೆಸಿದುದು ಸುಭದ್ರ ಸಮಾಜವನ್ನು ಕಟ್ಟಲು ಕುಟುಂಬವ್ಯವಸ್ಥೆ ಎಷ್ಟು ಆವಶ್ಯಕ ಎಂಬುದನ್ನು ತೋರಿಸುತ್ತದೆ.

ಸ್ವಾಮಿ ವಿವೇಕಾನಂದರ ಒಂದು ಬಹು ಮುಖ್ಯ ಕಾರ್ಯವೆಂದರೆ ವೇದಾಂತದ ಹಿನ್ನೆಲೆಯಲ್ಲಿ ಸಮಾಜಕ್ಕೆ ಒಂದು ಸುದೃಢ ನೈತಿಕ ತಳಹದಿಯನ್ನು ಒದಗಿಸುವುದು. ಅವರ ಪ್ರಕಾರ ನೈತಿಕ ಜೀವನದ ಅತಿಮುಖ್ಯ ಅಂಶವೇ ನಿಃಸ್ವಾರ್ಥತೆ—ನಾನು ನನ್ನದು ಎಂಬ ಭಾವದಿಂದ ಮುಕ್ತವಾಗಿ ಇತರರ ಬಗ್ಗೆ ಕಳಕಳಿಯನ್ನು ಹೊಂದಿರುವುದು. ನೈತಿಕ ನಿಯಮಾವಳಿ ಗಳನ್ನು ಪಾಲಿಸುವಾಗ ಅದರ ಹಿಂದೆ ಪರಹಿತಾಕಾಂಕ್ಷೆಯೂ ಇರಬೇಕು. ಏಕೆಂದರೆ ಸಾಮಾಜಿಕ ಹಿತದಿಂದ ಮಾತ್ರ ವ್ಯಕ್ತಿಯ ಹಿತ ಸಾಧಿತವಾಗುವುದು. ಆದ್ದರಿಂದ ಅವರು ಪರಕೇಂದ್ರಿತ ನೈತಿಕತೆಗೆ ಹೆಚ್ಚು ಒತ್ತನ್ನು ಕೊಟ್ಟರು.

**ನೈತಿಕತೆಯೆಂಬ ಪುಷ್ಪ ಪ್ರೀತಿಯ ಸುವಾಸನೆಯಿಂದ ಕೂಡಿರಬೇಕು, ನಿಷ್ಠುರತೆಯ ಮುಳ್ಳಿನಿಂದ ಕೂಡಿರಬಾರದು.**

ಸ್ವಾಮೀಜಿ ಜನರು ಅತ್ಯಂತ ಧಾರ್ಮಿಕರಾಗಿರುವುದನ್ನು ಕಂಡರು. ಆದರೆ ಅನೇಕಾನೇಕ ಧಾರ್ಮಿಕ ಆಚರಣೆಗಳಲ್ಲಿ ತೊಡಗಿದ್ದರೂ ಜನರು ನೈತಿಕತೆಯಿಂದ ದೂರವಾಗಿರುವುದನ್ನೂ ಅವರು ಗಮನಿಸಿದರು. ಅವರು ಹೇಳುತ್ತಾರೆ: "ಪ್ರಪಂಚದ ಧರ್ಮಗಳು ನಿರ್ಜೀವ ಅಣಕಗಳಾಗಿವೆ. ಜಗತ್ತಿಗೆ ಇಂದು ಬೇಕಾಗಿರುವುದು ಶೀಲ. ನಿಃಸ್ವಾರ್ಥ ಪ್ರೀತಿಯಿಂದ ಪ್ರಜ್ವಲಿಸುವ ವ್ಯಕ್ತಿಗಳು ಇಂದು ಜಗತ್ತಿಗೆ ಬೇಕಾಗಿದ್ದಾರೆ. ಆ ಪ್ರೀತಿ ಪ್ರತಿಯೊಂದು ಶಬ್ದವನ್ನೂ ಮಿಂಚಿನಂತೆ ಹೊಳೆಯುವಂತೆ ಮಾಡುತ್ತದೆ."

ಇಡೀ ದೇಹದ ಆರೋಗ್ಯ ಅದರ ಎಲ್ಲ ಭಾಗಗಳ ಆರೋಗ್ಯವನ್ನು ಅವಲಂಬಿಸಿರುತ್ತದೆ. ಹಾಗೆಯೇ ಸಮಾಜದ ಕ್ಷೇಮವೂ ಅದರ ಪ್ರತಿಯೊಬ್ಬ ವ್ಯಕ್ತಿಯ ನೈತಿಕ ಬಲವನ್ನು ಅವಲಂಬಿಸಿರುತ್ತದೆ. ಸ್ವಾಮೀಜಿ ಹೇಳುತ್ತಾರೆ: "ಮಾನವನು ಏತಕ್ಕೆ ನೀತಿಸಂಪನ್ನನೂ ಪರಿಶುದ್ಧನೂ ಆಗಿರಬೇಕು? ಏಕೆಂದರೆ ಅದು ಅವನ ಇಚ್ಛೆಯನ್ನು ಬಲಪಡಿಸುತ್ತದೆ. ವ್ಯಕ್ತಿಯ ನೈಜ ಸ್ವರೂಪವನ್ನು ಪ್ರಕಾಶಪಡಿಸಿ ಅವನ ಇಚ್ಛೆಯನ್ನು ಬಲಪಡಿಸುವ ಪ್ರತಿಯೊಂದೂ ನೈತಿಕವಾದುದು. ಇದಕ್ಕೆ ವಿರುದ್ಧವಾದುದೆಲ್ಲ ಅನೈತಿಕ."

ಸಮಾಜದ ಇನ್ನೊಂದು ಮುಖ್ಯ ತಳಹದಿ ತ್ಯಾಗ. ತ್ಯಾಗವೆಂದರೆ ಸಮಾಜದಿಂದ ದೂರವಾಗಿ ಸಂನ್ಯಾಸವನ್ನು ಸ್ವೀಕರಿಸುವುದೆಂದಾಗಲಿ, ಹಿಮಾಲಯಕ್ಕೊ ಕಾಡಿಗೊ ಹೋಗಿ ತಪಸ್ಸನ್ನಾಚರಿಸುವುದೆಂದಾಗಲಿ ಅಲ್ಲ. ಸಮಾಜದಲ್ಲಿಯೇ ಇದ್ದು ನಾವು ತ್ಯಾಗವನ್ನು ಅನುಸರಿಸಬೇಕು. ಪ್ರತಿಯೊಬ್ಬರೂ ಒಂದಲ್ಲ ಒಂದು ರೀತಿಯಲ್ಲಿ ತ್ಯಾಗಕ್ಕೆ ಸಿದ್ಧರಾಗಿದ್ದರೆ ಮಾತ್ರ ಸಮಾಜ ಸ್ಥಿರವಾಗಿ ಉಳಿಯುತ್ತದೆ. ವಿವೇಕಾನಂದರು ಹೇಳುತ್ತಾರೆ: "ಸಾಮಾಜಿಕ ರಚನೆ, ವಿವಾಹ ಪದ್ಧತಿ, ಮಕ್ಕಳಮೇಲಿನ ಪ್ರೀತಿ, ನಿಮ್ಮ ಸತ್ಕಾರ್ಯಗಳು ಮತ್ತು ನೈತಿಕತೆ ಇವೆಲ್ಲವೂ ತ್ಯಾಗದ ವಿವಿಧ ರೂಪಗಳು. ಪ್ರತಿಯೊಂದು ಸಮಾಜದಲ್ಲಿ ನಮ್ಮ ಇಡೀ ಜೀವನ ನಮ್ಮ ಇಚ್ಛೆಯನ್ನೂ ಆಸೆಯನ್ನೂ ನಿಗ್ರಹಿಸುವುದನ್ನು ಅವಲಂಬಿಸಿದೆ."

**ಆತ್ಮಾರ್ಪಣೆಯೇ ಎಲ್ಲ ನಾಗರಿಕತೆಗಳ ತಳಹದಿ.**

*— ಸ್ವಾಮಿ ವಿವೇಕಾನಂದ*

ಯಾವುದೇ ಸಮಾಜ ಅಥವಾ ಸಂಸ್ಥೆ ಮೂಲಭೂತವಾಗಿ ಪ್ರತಿಯೊಬ್ಬ ವ್ಯಕ್ತಿಯ ತ್ಯಾಗವನ್ನು ಅವಲಂಬಿಸಿರುತ್ತದೆ. ಅನೇಕ ಸದಸ್ಯರು ತಮ್ಮ ಧನವನ್ನೊ ಶ್ರಮವನ್ನೊ ಸಮಯವನ್ನೊ ತ್ಯಾಗಮಾಡಿ ಒಟ್ಟು ಸೇರಿ ಒಂದು ಸಂಸ್ಥೆ ನಿರ್ಮಾಣವಾಗುತ್ತದೆ. ಹಾಗೆ ನಿರ್ಮಾಣವಾದ ಸಂಸ್ಥೆ ಮುಂದುವರಿಯುವುದೂ ಪ್ರತಿಯೊಬ್ಬ ಸದಸ್ಯನ ತ್ಯಾಗವನ್ನು ಅವಲಂಬಿಸಿರುತ್ತದೆ. ಶ್ರೀರಾಮಕೃಷ್ಣರ ಜೀವನ ಈ ತ್ಯಾಗದ ಮಹತ್ವವನ್ನು ಎತ್ತಿಹಿಡಿಯುತ್ತದೆ. ಅವರ ಬಗ್ಗೆ ಶ್ರೀಮಾತೆಯವರು ಹೀಗೆ ಹೇಳುತ್ತಾರೆ: "ಮಗು, ಶ್ರೀರಾಮಕೃಷ್ಣರು ಧರ್ಮಸಮನ್ವಯವನ್ನು ಬೋಧಿಸಿದರು ಎಂದು ನೀನು ಹೇಳುವುದು ನಿಜ. ಆದರೆ ಈ ಸಮನ್ವಯವನ್ನು ಬೋಧಿಸುವುದಕ್ಕಾಗಿಯೇ ಅವರು ವಿವಿಧ ಧರ್ಮಸಾಧನೆಯನ್ನು ಮಾಡಿದರು ಎಂದು ನನಗನಿಸುವುದಿಲ್ಲ... ನನಗನ್ನಿಸುವಂತೆ ಅವರ ಸಾಧನೆಯ ಅತ್ಯಂತ ಮುಖ್ಯ ಲಕ್ಷಣವೇ ತ್ಯಾಗ. ಅಂಥ ಸ್ವಾಭಾವಿಕವಾದ ತ್ಯಾಗವನ್ನು ಯಾರಾದರೂ ಕಂಡಿರುವರೆ? ತ್ಯಾಗವೇ ಅವರ ಶ್ರೇಷ್ಠ ಆಭರಣ," (*ವಾತ್ಸಲ್ಯ ತೀರ್ಥ*, ಪು. ೧೧೪)

ಇಂದಿನ ಸ್ಪರ್ಧಾತ್ಮಕ ಸಮಾಜದಲ್ಲಿ ಪ್ರತಿಯೊಬ್ಬನೂ "ತನಗೆ ತಾನೇ" (each for himself) ಬಾಳುವ, ಇತರರನ್ನು ಕಡೆಗಣಿಸುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳುತ್ತಿರುವನು. ಇಂತಹ ಸ್ಥಿತಿಯಲ್ಲಿ ತ್ಯಾಗಮನೋಭಾವ ಬೆಳಸಿಕೊಳ್ಳುವುದು ಅತ್ಯಂತ ಆವಶ್ಯಕವಾಗಿದೆ. ಇದರಿಂದ ಎಲ್ಲ ಸದ್ಗುಣಗಳೂ ಮಾನವೀಯ ಮೌಲ್ಯಗಳೂ ವ್ಯಕ್ತಿಯಲ್ಲಿ ಸ್ವಾಭಾವಿಕವಾಗಿ ಮೂಡಿಬರುತ್ತವೆ. ಹೀಗೆ ಈ ಮೂವರು ಮಹಾತ್ಮರು ಸಮಾಜದ ಸ್ವಾಸ್ಥ್ಯಕ್ಕೆ ಅತ್ಯಂತ ಆವಶ್ಯಕವಾದ ಮೂರು ಮುಖ್ಯ ಅಂಶಗಳನ್ನು ಪ್ರತಿನಿಧಿಸಿದ್ದಾರೆ. ಇದನ್ನು ಅರಿತು ಅನುಸರಿಸುವುದು ನಮ್ಮ ಪಾಲಿನದು.

ರಾಮಕೃಷ್ಣಾವತಾರದ ಈ ರೀತಿಯ ವಿಶ್ಲೇಷಣೆ ಎಲ್ಲರಿಗೂ ಒಪ್ಪಿಗೆಯಾಗದಿರಬಹುದು. ಆದರೆ ಇದು ಅವರ ಜೀವನ-ಸಂದೇಶಗಳ ಮುಖ್ಯಭಾವಕ್ಕೆ ವಿರುದ್ಧವಾಗಿಯೇನೂ ಇಲ್ಲ. ವ್ಯಕ್ತಿ ಮತ್ತು ಸಮಾಜದ ಒಳಿತನ್ನು ಗಮನದಲ್ಲಿಟ್ಟುಕೊಂಡು, ವಿವಿಧ ದೃಷ್ಟಿಕೋನಗಳಿಂದ ಇಂತಹ ಅವತಾರಪುರುಷರ ಜೀವನ-ಸಂದೇಶಗಳ ವಿಶ್ಲೇಷಣೆ ಅವರ ಸಾಹಿತ್ಯದ ಬೆಳವಣಿಗೆಗೆ ಮತ್ತು ತನ್ಮೂಲಕ ಅವರ ಭಾವನೆಗಳ ಪ್ರಚಾರಕ್ಕೆ ಸಹಾಯಕವಾಗುತ್ತದೆ.

(ಮುಗಿಯಿತು.)